# ‘ಸ್ಫೂರ್ತಿದಾಯಕ ಕಥೆಯ ಅನಾವರಣ



## ಅನುಷಾ
### ಕಲರ್ಸ್ ಕನ್ನಡದ ‘ಶಾಂತಂ ಪಾಪಂ’ ನಟಿ

◆ ಬಣ್ಣದ ಲೋಕದಲ್ಲಿ ಕಾಣಿಸಿಕೊಂಡಿದ್ದು ಹೇಗೆ?

ಆರಂಭ ಬೆಳ್ಳಿತೆರೆಯ ಮೂಲಕ ಆಯಿತು. ಮೊದಲ ಸಿನಿಮಾ ‘ಕೃಷ್ಣಲೀಲಾ’ದಲ್ಲಿ ನಾಯಕನ ತಂಗಿಯ ಪಾತ್ರ. ನಂತರ ಝೀ ಕನ್ನಡದಲ್ಲಿ ‘ಶ್ರೀಮಾನ್ ಶ್ರೀಮತಿ’ಗೆ ನಾಯಕಿ. ‘ಝಲ್ಲಾ’, ‘ಲೌಡ್ ಸ್ಪೀಕರ್’ ಸಿನಿಮಾ, ‘ಡಾನ್ಸ್ ಕರ್ನಾಟಕ ಡಾನ್ಸ್’ ರಿಯಾಲಿಟಿ ಶೋ ಮೊದಲ ಸರಣಿಯ ಸ್ಪರ್ಧಿ. ಐ ಫೋನ್‌ನಲ್ಲಿ ಚಿತ್ರೀಕರಿಸಿದ ಮೊದಲ ಸಿನಿಮಾ ‘ಡಿಂಗಾ’ದ ನಾಯಕಿ ಆಗಿದ್ದೆ. ‘ದಾರಿ ಯಾವುದಯ್ಯ ವೈಕುಂಠಕೆ’ ಸಿನಿಮಾಕ್ಕೂ ಅಭಿನಯ ಮಾಡಿದ್ದೆ. ಕಲರ್ಸ್ ಕನ್ನಡದ ‘ಇವಳು ಸುಜಾತ’ದಲ್ಲಿ ನೆಗೆಟಿವ್ ಪಾತ್ರವನ್ನು ನಿರ್ವಹಿಸಿದ್ದೆ. ‘ಕತ್ತಲನ ತ್ರಿಶೂಲ’ ಕಲಾತ್ಮಕ ಸಿನಿಮಾದಲ್ಲಿ ನಟಿಸಿದ್ದೇನೆ. ‘ಉಧೋ ಉಧೋ ರೇಣುಕಾ ಯಲ್ಲಮ್ಮ’ದಲ್ಲಿ ಲಕ್ಷ್ಮಿ ಆಗಿದ್ದೇನೆ. ಕಲರ್ಸ್ ಕನ್ನಡದಲ್ಲಿ ‘ಶಾಂತಂ ಪಾಪಂ’ ಮಾಡುತ್ತಿದ್ದೇನೆ. ಸದ್ಯ ಎರಡು ಸಿನಿಮಾದಲ್ಲಿ ಮಾಡುತ್ತಿದ್ದೇನೆ. ಇದು ಖುಷಿ ಕೊಡುವ ಕೆಲಸ ಆಗಿದ್ದರಿಂದ ಒತ್ತಡ ಎಂದು ಅನ್ನಿಸುವುದಿಲ್ಲ.

◆ ಮಾಡಲೇಬೇಕಾದ ಪಾತ್ರದ ಬಗ್ಗೆ ಹೇಳಿ?

ಕಲಾವಿದರಿಗೆ ಪಾತ್ರಗಳ ವಿಷಯದಲ್ಲಿ ತೃಪ್ತಿ ಎನ್ನುವುದೇ ಇರಲ್ಲ. ನನಗೆ ಪೌರಾಣಿಕ ಪಾತ್ರಗಳನ್ನು ನಿರ್ವಹಿಸುವ ಆಸೆ ಇತ್ತು. ‘ಉಧೋ ಉಧೋ ರೇಣುಕಾ ಯಲ್ಲಮ್ಮ’ದಲ್ಲಿ ಲಕ್ಷ್ಮಿ ಪಾತ್ರದ ಮೂಲಕ ಆ ಕೋರಿಕೆಯೂ ಈಡೇರಿದೆ. ಇಂತಹ ಪಾತ್ರ ನಿರ್ವಹಿಸುವುದು ಕಷ್ಟದ ಕೆಲಸವೇ ಸರಿ. ನನಗೆ ನಿಜಕ್ಕೂ ಖುಷಿ ಕೊಟ್ಟಿದೆ. ಮಹಿಳೆ ಮುಖ್ಯಭೂಮಿಕೆಯಲ್ಲಿರುವ ಸಿನಿಮಾ ಮಾಡಬೇಕು. ನನ್ನ ಸಿನಿಮಾ ಎಂದೇ ನೋಡುವಂತೆ ಆಗಬೇಕು ಎನ್ನುವ ಕನಸೂ ಇದೆ.

◆ ‘ಶಾಂತಂ ಪಾಪಂ’ ವೇಷ ಬದಲಾಗುತ್ತಲೇ ಇರುತ್ತದೆ. ಇದು ಇಷ್ಟ ಆಗಿದ್ದೇಕೆ?

ಮೊದಲಿಗೆ ‘ಶಾಂತಂ ಪಾಪಂ’ ವಿಭಿನ್ನ ವೇದಿಕೆ ಎಂದು ಅನ್ನಿಸಿತು. ಇಲ್ಲಿ ವೈವಿಧ್ಯಕ್ಕೆ ಅವಕಾಶ ಇದೆ ಎನ್ನುವುದು ಮನವರಿಕೆ ಆಯಿತು. ಆ್ಯಕ್ಷನ್ ಫಿಕ್ಷನ್ ಇರುವ ಕಥೆಯಲ್ಲಿ ನೆಗೆಟಿವ್ ಶೇಡ್ ಪಾತ್ರವನ್ನು ಇದುವರೆಗೆ ಮಾಡಿರಲಿಲ್ಲ. ಅದರ ಸವಾಲುಗಳನ್ನು ಎದುರಿಸಬೇಕು ಎಂದೆನಿಸಿತು. ಇದರಲ್ಲಿ ಮೂರು ಎಪಿಸೋಡ್ ಮಾಡಿದ್ದೇನೆ. ಆ ಮೂರರಲ್ಲೂ ನನ್ನ ಪಾತ್ರವನ್ನೇ ಕೇಂದ್ರೀಕರಿಸಿ ಕಥೆ ವಿಸ್ತಾರವಾಗುತ್ತದೆ. ಮತ್ತೊಂದು ಖುಷಿಯ ಸಂಗತಿ ಏನೆಂದರೆ ಈ ಧಾರಾವಾಹಿಯಲ್ಲಿ ಸಮಾಜದ ಬಗ್ಗೆ ಕಾಳಜಿ ಇದೆ. ಯುವಜನರಿಗೆ ಉತ್ತಮ ಸಂದೇಶ ನೀಡುತ್ತದೆ. ವರ್ತಮಾನದ ಘಟನೆಗಳನ್ನೇ ಸೃಜನಶೀಲವಾಗಿ ನಿರೂಪಿಸುವ ಕಲೆಯೂ ಇಷ್ಟ ಆಯಿತು. ಒಟ್ಟಾರೆ ಕೆಲಸ ಅಥವಾ ಸಂಭಾವನೆ ಎನ್ನುವುದಕ್ಕಿಂತ ನಟಿಯಾಗಿ ಸಾಮಾಜಿಕ ಜವಾಬ್ದಾರಿಯನ್ನು ಸಣ್ಣಮಟ್ಟಿಗೆ ನಿರ್ವಹಿಸಬಹುದು ಎಂದೇ ಬಂದೆ. ವೀಕ್ಷಕರಿಗೆ ಸ್ಫೂರ್ತಿಯನ್ನು ಇದು ನೀಡುತ್ತದೆ.

◆ ಇವತ್ತಿನ ಸಂದರ್ಭದಲ್ಲಿ ನಿಂತು ನಿಮ್ಮ ವೃತ್ತಿ ಜೀವನದ ಮೊದಲ ದಿನಗಳನ್ನು ನೋಡಿದರೆ..

ಸುಮಾರು ಹತ್ತು ವರ್ಷ ಆಗಿದೆ. ನಾನು ಎಂತಹ ಅದೃಷ್ಟವಂತೆ ಅಂದರೆ, ಚಿತ್ರಮಂದಿರಗಳಲ್ಲಿ ಸಿನಿಮಾ ಆರ್ಭಟ ಇದ್ದ ಸಮಯದಲ್ಲಿ ನಾನು ಬಣ್ಣವನ್ನು ಹಚ್ಚಿದೆ. ಟಾಕೀಸ್‌ನಲ್ಲಿ ಬಿಡುಗಡೆಯಾಗಿ ವೀಕ್ಷಕರು ಚಪ್ಪಾಳೆ, ಶಿಳ್ಳೆ ಹೊಡೆಯುವುದನ್ನು ಕಣ್ಣು ತುಂಬಿಕೊಂಡಿದ್ದೇನೆ. ಇದಾಗಿ ಒಂದೆರಡು ವರ್ಷದಲ್ಲಿ ಒಟಿಟಿ ಜನಪ್ರಿಯವಾಯಿತು. ಅದರಿಂದ ಉದ್ಯಮದ ವ್ಯವಹಾರ ಹೆಚ್ಚಿರಬಹುದು. ಕಲಾವಿದರಿಗೆ ಚಿತ್ರಮಂದಿರಗಳಲ್ಲಿ ಸಿಗುವ ಥ್ರಿಲ್ ಇಲ್ಲ ಎಂದು ಅನ್ನಿಸುತ್ತದೆ. ಕುಟುಂಬದ ಸದಸ್ಯರು ವಾರದ ಒಂದು ದಿನ ಗೊತ್ತುಮಾಡಿಕೊಂಡು ಟಾಕೀಸ್‌ಗೆ ಹೋಗಿ ಸಿನಿಮಾ ನೋಡುವ ಮಜಾನೇ ಭಿನ್ನ. ಸಂಪಾದನೆಗೆ ಬೇರೆ ಏನಾದರೂ ಮಾಡಬಹುದು. ಜನರ ಗುರುತಿಸುವಿಕೆ, ಪ್ರಶಂಸೆ ಮರೆಯಾದಂತೆ ಆಗುತ್ತಿದೆ. ಆದರೆ ಟೀವಿಯಲ್ಲಿ ಚಿರಪರಿಚಿತ ಆಗುತ್ತೇವೆ.

◆ ನಿಮ್ಮ ಬದುಕಿನ ಹುಡುಕಾಟದಲ್ಲಿ ನಟನೆಯ ದಾರಿ ಕಂಡಿದ್ದು ಹೇಗೆ?

ಕಾಲೇಜು ದಿನಗಳಲ್ಲಿಯೇ ಡಾನ್ಸ್ ಅಭ್ಯಾಸವನ್ನು ಆರಂಭಿಸಿದೆ. ಪ್ರದರ್ಶನ ಕಲೆಯಲ್ಲಿ ಆಸಕ್ತಿ ಇತ್ತು. ನಮ್ಮ ಪೋಷಕರಿಗೆ ಇದು ಇಷ್ಟ ಇರಲಿಲ್ಲ. ಅವರ ಸಲಹೆಯಂತೆ ಎಂಬಿಎ ಮಾಡಿದ್ದೇನೆ. 2014ರಲ್ಲಿ ಸಂಸ್ಥೆಯೊಂದು ಸೌಂದರ್ಯ ಸ್ಪರ್ಧೆಯನ್ನು ಏರ್ಪಡಿಸಿತ್ತು. ಅದರಲ್ಲಿ ಗೆಲುವು ನನ್ನ ಪಾಲಿಗೆ ದೊರಕಿತು. ಅದೇ ಸಮಯದ ನನ್ನ ಫೋಟೊಗಳಿಂದ ‘ಕೃಷ್ಣ ಲೀಲಾ’ದ ಪಾತ್ರ ಒಲಿದು ಬಂತು. ಅದಾದ ಮೇಲೆ ನಿರಂತರವಾಗಿ ಒಂದಲ್ಲ ಒಂದು ಪಾತ್ರವನ್ನು ನಿರ್ವಹಿಸುತ್ತಲೇ ಇದ್ದೇನೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ.

■ **ರಾಘವೇಂದ್ರ ಕೆ.**